ಸಂ/ಜಿಸಕಅ/ಡಿ3/ಸಿಬ್ಬಂದಿ/ಸಿಆರ್36/16–17

ಉಪನಿರ್ದೇಶಕರ ಕಛೇರಿ,
ಸಮಾಜ ಕಲ್ಯಾಣ ಇಲಾಖೆ,
ಹಾಸನ ಜಿಲ್ಲೆ, ಹಾಸನ. ದಿ:12–1–2018.

## ಸೂಚನಾ ಪತ್ರ

ವಿಷಯ:– ಹಾಸನ ಜಿಲ್ಲೆ, ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಗ್ರೂಪ್ 'ಡಿ' ವೃಂದದ ಕಾವಲುಗಾರರ ಹುದ್ದೆಗೆ ನೇರ ನೇಮಕಾತಿಗೆ ಸಂಬಂಧಿಸಿದಂತೆ ಸ್ಥಳ ಆಯ್ಕೆಗಾಗಿ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ನಡೆಸುವ ಬಗ್ಗೆ.

ಉಲ್ಲೇಖ:1)ಸರ್ಕಾರಿ ಆದೇಶದ ಸಂಖ್ಯೆ:ಸಕಇ 268 ಪಕಸೇ 2016 ದಿ:29–9–2016.
2)ಜಿಲ್ಲಾಧಿಕಾರಿಗಳು, ಹಾಸನ ರವರ ಇದೇ ಸಮಸಂಖ್ಯೆ ಅಧಿಸೂಚನೆ ದಿ:20–10–16.
3)ದಿ:3–8–2017 ರಂದು ಜಿಲ್ಲಾಧಿಕಾರಿಗಳು, ಹಾಸನ ಹಾಗೂ ಅಧ್ಯಕ್ಷರು, ಜಿಲ್ಲಾ ಮಟ್ಟದ 'ಡಿ' ವೃಂದದ ನೇಮಕಾತಿ ಪ್ರಾಧಿಕಾರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.
4)ಸರ್ಕಾರದ ಆದೇಶ ಸಂ/ಸಕಇ 15 ಪಕಸೇ 2018, ಬೆಂಗಳೂರು, ದಿ:12–1–2018.

*********

ಹಾಸನ ಜಿಲ್ಲೆ, ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಗ್ರೂಪ್ 'ಡಿ' ವೃಂದದ ಕಾವಲುಗಾರರ ಹುದ್ದೆಗೆ ನೇರ ನೇಮಕಾತಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳ ಕೌನ್ಸಿಲಿಂಗ್ ನಡೆಸಲು ಉಲ್ಲೇಖ (4)ರ ಆದೇಶದಲ್ಲಿ ಆದೇಶಿಸಲಾಗಿರುವುದರಿಂದ ದಿ:18–1–2018 ರಂದು ಮಧ್ಯಾಹ್ನ 1.30 ಗಂಟೆಯಿಂದ 5.30 ರವರೆಗೆ ಕೌನ್ಸಿಲಿಂಗ್ ನಡೆಸಲಾಗುವುದು. ಆದ್ದರಿಂದ ಅಭ್ಯರ್ಥಿಗಳು **ದಿ:18–1–2018 ರಂದು ಮಧ್ಯಾಹ್ನ 1.00 ಗಂಟೆಗೆ ಸರಿಯಾಗಿ ಉಪ ನಿರ್ದೇಶಕರ ಕಛೇರಿ, ಡಾ:ಬಿ.ಆರ್.ಅಂಬೇಡ್ಕರ್ ಭವನ, ಹಾಸನ** ಇಲ್ಲಿ ಹಾಜರಿರುವುದು. ಕೌನ್ಸಿಲಿಂಗ್‌ಗೆ ಹಾಜರಾಗದಿದ್ದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಪಟ್ಟಿಯಿಂದ ಕೈಬಿಡಲಾಗುವುದು.

ಅಭ್ಯರ್ಥಿಗಳು ಹಾಜರಾಗುವಾಗ ಸಂಬಂಧಪಟ್ಟ ಜಿಲ್ಲಾ ಶಸ್ತ್ರ ಚಿಕಿತ್ಸಕರಿಂದ ಪಡೆದಿರುವ ದೇಹ ದಾರ್ಢ್ಯತೆ ಬಗ್ಗೆ ಪಡೆದಿರುವ ಮೂಲ ಪ್ರಮಾಣ ಪತ್ರದೊಂದಿಗೆ ಹಾಜರಾಗುವುದು.

ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಮಟ್ಟದ ಗ್ರೂಪ್–ಡಿ ನೇಮಕಾತಿ
ಪ್ರಾಧಿಕಾರಿ ಹಾಗೂ ಉಪ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,
ಹಾಸನ ಜಿಲ್ಲೆ, ಹಾಸನ